**ಗೌರವಾನ್ವಿತ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ದಾವಣಗೆರೆ.**

**ಪಿ.ಅಂಡ್ ಎಸ್.ಸಿ ನಂಃ 2/2026**

ಅರ್ಜಿದಾರರು ಃ ಜಿ.ಎನ್. ಮಹೇಶ್ವರಪ್ಪ

ವಿರುದ್ಧ

ಎದುರುದಾರರು ಃ ಇಲ್ಲ

**ಅರ್ಜಿದಾರರ ಪರ ಸಾಕ್ಷಿಯ ಮುಖ್ಯ ವಿಚಾರಣೆ ಪ್ರಮಾಣ ಪತ್ರ**

ನಾನು, ಮಹೇಂದ್ರಮೂರ್ತಿ ಬಿನ್ ಬಿ.ರಂಗಪ್ಪ, ವಯಸ್ಸು 62 ವರ್ಷ, ವಕೀಲರು, ಕಛೇರಿ ಃ ಚನ್ನಗಿರಿ ಪೊಲೀಸ್ ಠಾಣೆ ಹತ್ತಿರ, ಚನ್ನಗಿರಿ ತಾಲ್ಲೂಕು, ಆದ ನಾನು ಈ ಕೆಳಕಂಡಂತೆ ಪ್ರಮಾಣ ಮಾಡಿ ಹೇಳುವುದೇನೆಂದರೆ ಃ

ನನಗೆ ಈ ಪ್ರಕರಣದ ಅರ್ಜಿದಾರರಾದ ಜಿ.ಎನ್. ಮಹೇಶ್ವರಪ್ಪ ಬಿನ್ ಲೇಟ್ ನಂಜುಂಡಪ್ಪ ಇವರು ಶ್ರೀಮತಿ ಜಯಮ್ಮ ಎಂಬುವವರು ದಿನಾಂಕ ಃ 15.04.2005 ರಂದು ವಿಲ್ ಮಾಡಿದ್ದು ಸದರಿಯವರು ದಿನಾಂಕ ಃ 07.05.2005 ರಂದು ಮರಣ ಹೊಂದಿದ್ದು, ಈ ಬಗ್ಗೆ ಸಾಕ್ಷಿ ನುಡಿಯಲು ಮನವಿ ಮಾಡಿಕೊಂಡ ಮೇರೆಗೆ ನಾನು ಈ ದಿನ ನ್ಯಾಯಾಲಯದಲ್ಲಿ ಹಾಜರಾಗಿ ಹೇಳುವುದೇನೆಂದರೆ ಃ

ದಿನಾಂಕಃ 15.04.2005 ರಂದು ಶ್ರೀಮತಿ ಜಯಮ್ಮ ಕೋಂ ಜಿ.ಎನ್.ಮಹೇಶ್ವರಪ್ಪ ಎನ್ನುವವರು ನನ್ನನ್ನು ಚನ್ನಗಿರಿ ನ್ಯಾಯಾಲಯದ ಹತ್ತಿರ ಸಂಪರ್ಕಿಸಿ ನಾನು ಕತ್ತಲಗೆರೆ ಗ್ರಾಮದಲ್ಲಿರುವ ಅಗ್ರಿಕಲ್ಚರ್ ರೀಸರ್ಚ ಸೆಂಟರ್‌ನಲ್ಲಿ ಡಿ ಗ್ರೂಪ್ ನೌಕರಳಾಗಿದ್ದು ನನಗೆ ಆರೋಗ್ಯ ಕ್ಷೀಣಿಸುತ್ತಿದ್ದು, ನನ್ನ ಮರಣಾ ನಂತರ ನನ್ನ

NO. OF. CORRECTIONS

NOTARY
B.G.REVANASIDDAPPA
B.A.,LL.B
Reg. No. : LAW
LCL 208/2024

ಸಬೂಬು ಬರಬೇಕಾದ ಸರ್ಕಾರಿ ಸೌಲಭ್ಯಗಳ ಬಗ್ಗೆ ನನ್ನ ಪತಿ ಜಿ.ಎನ್. ಮಹೇಶ್ವರಪ್ಪ ನವರಿಗೆ ಸೇರಬೇಕೆಂದು ಹಾಗೂ ನಾನು ನನ್ನ ಸರ್ಕಾರಿ ನೌಕರಿಯಲ್ಲಿ ಇರುವಾಗಲೇ ಮರಣ ಹೊಂದಿದರೆ ಅನುಕಂಪದ ಆಧಾರದ ನೌಕರಿಯನ್ನು ಮಗ ಸಿದ್ದಲಿಂಗಪ್ಪ ಇವರಿಗೆ ನೌಕರಿ ಕೊಡಬೇಕೆಂದು ವಿಲ್ ಬರೆಯಲು ಸಂಪೂರ್ಣವಾಗಿ ನಿಶ್ಚಯಿಸಿ ರುತ್ತೇನೆ. ಈ ಬಗ್ಗೆ ಒಂದು ವಿಲ್ ಮಾಡಿಕೊಡಬೇಕು ಎಂದು ಕೇಳಿಕೊಂಡರು ಹಾಗೂ ಅವರಿಗೆ ಪರಿಚಯವಿರುವ ಮೂವರು ವ್ಯಕ್ತಿಗಳಾದ ಹೆಚ್.ಬಿ. ಶಿವಪ್ಪ, ರಂಗಸ್ವಾಮಿ, ಜಿ.ಟಿ.ರಾಜು ಎನ್ನುವವರನ್ನು ಕರೆದುಕೊಂಡು ಬಂದಿದ್ದರು, ನಾನು ಸದರಿಯವರ ಹೆಸರು ಮತ್ತು ಸಂಪೂರ್ಣ ಮಾಹಿತಿ ಪಡೆದು ಆರೋಗ್ಯದ ಬಗ್ಗೆ ಸಂಪೂರ್ಣ ದಾಖಲೆಗಳನ್ನು ಪಡೆದು ಮತ್ತು ಸರ್ಕಾರದಿಂದ ಅವರಿಗೆ ಬರಬೇಕಾದ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದು ಒಂದು ಮರಣ ಶಾಸನ ಪತ್ರ ತಯಾರಿಸಿ ನೋಂದಣಿ ಮುದ್ರಾಂಕ ದಸ್ತಾವೇಜನ್ನು ಖರೀದಿಸಲು ತಿಳಿಸಿದೆನು. ಶ್ರೀಮತಿ ಜಯಮ್ಮ ಅವರು ಮೂರು ದಸ್ತಾವೇಜು ಹಾಳೆಗಳನ್ನು ಮುದ್ರಾಂಕಗಳೊಂದಿಗೆ ಖರೀದಿಸಿ ತಂದು ಕೊಟ್ಟ ಮೇರೆಗೆ ವಿಲ್ ತಯಾರಿಸಿ ಸಂಪೂರ್ಣವಾಗಿ ಓದಿ ತಿಳಿಸಿ, ಹಾಗೂ ಸ್ವತಃ ಜಯಮ್ಮ ಅವರ ಓದಿ ತಿಳಿದುಕೊಂಡು ಪ್ರಥಮವಾಗಿ ನನ್ನ ಸಮಕ್ಷಮ ಮತ್ತು ಸಾಕ್ಷಿಗಳಾಗಿ ಬಂದಿದ್ದ, ಶಿವಪ್ಪ, ರಂಗಸ್ವಾಮಿ, ಜಿ.ಟಿ. ರಾಜು, ಇವರುಗಳ ಸಮಕ್ಷಮ ವಿಲ್‌ನ ಎಲ್ಲಾ ಪುಟಗಳಿಗೂ ಸಹಿ ಮಾಡಿದರು. ನಂತರ ಸಾಕ್ಷಿದಾರರಾಗಿ ಕರೆದುಕೊಂಡು ಬಂದಿದ್ದ ಶಿವಪ್ಪ, ರಂಗಸ್ವಾಮಿ, ಜಿ.ಟಿ.ರಾಜು, ಇವರು ಜಯಮ್ಮ ಮತ್ತು ನನ್ನ ಸಮಕ್ಷಮ ಸಾಕ್ಷಿಗಳಾಗಿ ಸಹಿ ಮಾಡಿದರು. ನಂತರ ನಾನು ವಿಲ್ ತಯಾರಿಸಿದ ಬಗ್ಗೆ ಸಹಿ ಮಾಡಿ ಸದರಿ ಪತ್ರವನ್ನು ಜಯಮ್ಮ ಇವರು ನೋಂದಾಯಿಸಬೇಕೆಂದು ಕೇಳಿಕೊಂಡ ಮೇರೆಗೆ ಸುಮಾರು 4–50 ಗಂಟೆ ಸಮಯದಲ್ಲಿ ಶ್ರೀಮತಿ ಜಯಮ್ಮ ಇವರಿಗೆ ವಿಲ್ ಹಸ್ತಾಂತರಿಸಿ ಸಬ್ ರಿಜಿಸ್ಟಾರ್ ರವರ ಬಳಿ ನೋಂದಾಯಿಸಲು ಹಾಜರು ಪಡಿಸಲು ಹೇಳಿದೆನು. ಜಯಮ್ಮ ಇವರು ಸದರಿ ವಿಲ್ಲನ್ನು

NOTARY
BEVANASIDDAPPA

ನೋಂದಣಾಧಿಕಾರಿಗಳ ಸಮಕ್ಷಮದಲ್ಲಿ ನೋಂದಾಯಿಸಿ ನಂತರ ಸದರಿ ಪತ್ರವನ್ನು ಅವರೇ ತೆಗೆದುಕೊಂಡು ಹೋದರು.

ಆ ರೀತಿ ನಾನು ತಯಾರಿಸಿದ ವಿಲ್ ದಿನಾಂಕ : 15.04.2005 ನೇ ಇಸ್ವಿ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಹಾಗೂ ಅದರಲ್ಲಿರುವ ಶ್ರೀಮತಿ ಜಯಮ್ಮ ಇವರ ಸಹಿ ಹಾಗೂ ಸಾಕ್ಷಿದಾರರ ಸಾಕ್ಷಿ ಮತ್ತು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ.

ಹೀಗೆಂದು ನಾನು ಸ್ವತಃ ಬರೆಯಿಸಿದ ಈ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಎಲ್ಲಾ ಸಂಗತಿಗಳು ಸತ್ಯವಾಗಿವೆ ಎಂದು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಸಹಿ ಮಾಡಿರುತ್ತೇನೆ.

ಗುರುತಿಸುವವರು,

ವಕೀಲರು.

ಪ್ರಮಾಣಕರ್ತ.

ಸ್ಥಳ : ದಾವಣಗೆರೆ,

ದಿನಾಂಕ : 17.07.2026.

NOTARY * GOVT. OF KARANATAKA - INDIA
B.G.REVANASIDDAPPA B.A.,LL.B.,
Reg. No. : LAW LCL 208/2024
Expiry Dt. : Feb 16-2030
Davanagere Taluk

SWORN TO BEFORE ME
17-7-26
NOTARY
DAVANAGERE CITY

NO. OF CORRECTIONS
-Nil-

P&SC.2/2026

PW-2

ಇಂದು ದಿ.17-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಮುಖ್ಯ ವಿಚಾರಣೆಃ-</u> ಅರ್ಜಿದಾರರ ಪರ ಶ್ರೀ ಸಿ ಎಸ್ ಎ ವಕೀಲರಿಂದ.

1. ನಾನು ಈ ಪ್ರಕರಣದ ಸಾಕ್ಷಿದಾರನಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದ್ದು, ಅದನ್ನು ಓದಿ, ತಿಳಿದುಕೊಂಡು ಅದಕ್ಕೆ ಸಹಿ ಮಾಡಿದ್ದೇನೆ. ನನ್ನ ಮುಖ್ಯ ವಿಚಾರಣೆಯನ್ನು ಪುಷ್ಟಿಕರಿಸಲು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

2. ಸಾಕ್ಷಿಯು ನಿಪಿ.1 ವಿಲ್ ನೋಡಿ, ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಜಯಮ್ಮ ರವರ ಸಹಿಯನ್ನು ನೋಡಿ ಗುರುತಿಸಿದ್ದು , ಜಯಮ್ಮ ರವರ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.